**III ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.**

ಉಪಸ್ಥಿತರು

ಶ್ರೀ ದೀಪು ಎಂ.ಟಿ. ಬಿ.ಎ.ಎಲ್, ಎಲ್‌ಎಲ್‌ಬಿ.,

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ಕಡೂರು.

**ಅಸಲು ದಾವಾ ಸಂಖ್ಯೆ: 24 /2019**

**ದಿನಾಂಕ: 17 ನೇ ಮಾರ್ಚ್ 2020**

ವಾದಿಗಳು: ಶ್ರೀಮತಿ ಮರಿಯಮ್ಮ ಕೋಂ ಸತ್ಯಮೂರ್ತಿ, 68 ವರ್ಷ, ವಾಸ ಕೆಇಬಿ ಕಾಲೋನಿ, ಆಧಿಶಕ್ತಿ ನಿಲಯ, ಲಕ್ಷ್ಮೀಪುರ ಬಡಾವಣೆ,ಅರಸೀಕೆರೆ.

(ಪ್ರತಿನಿಧಿಸುವವರು:ಶ್ರೀ ಕೆ. ವಿ.ಎಂ., ವಕೀಲರು)

-ವಿರುದ್ಧ-

ಪ್ರತಿವಾದಿಗಳು: 1.ಶ್ರೀಮತಿ ಆಶಾ ಕೋಂ ತೀರ್ಥೇಶ, 46 ವರ್ಷ, ಮನೆಕೆಲಸ,

2. ಶ್ರೀಮತಿ ಯಾಶೋದ ಕೋಂ ಬಸವರಾಜು, 44 ವರ್ಷ, ಮನೆಕೆಲಸ,

3. ಮಧು ಕೋಂ ಪ್ರವೀಣ್ ಕುಮಾರ್, 40 ವರ್ಷ, ಮನೆಕೆಲಸ,

4. ಶ್ರೀಮತಿ ರೇಣುಕಾ ಕೋಂ ಕುಮಾರ್, 38 ವರ್ಷ, ಮನೆಕೆಲಸ,

ಪ್ರತಿವಾದಿ 1 ರಿಂದ 4 ರವರ ವಾಸ: ಸಂಖ್ಯೆ 44/3, 1 ನೇ ಮುಖ್ಯ ರಸ್ತೆ, 4 ನೇ ತಿರುವು, ವಿದ್ಯಾ ನಿಕೇತನ ಶಾಲೆಯ ಹತ್ತಿರ, ವಿದ್ಯಾ ನಗರ , ಟಿ. ದಾಸರಹಳ್ಳಿ, ಬೆಂಗಳೂರು-57.

5. ಶ್ರೀಮತಿ ಸಾಕಮ್ಮ ಕೋಂ ದೇವರಾಜ್, 42 ವರ್ಷ, ಮನೆಕೆಲಸ,

6. ಶ್ರೀಮತಿ ಮಂಜುಳ ಕೋಂ ಮಂಜಪ್ಪ, 36 ವರ್ಷ, ಮನೆಕೆಲಸ,

7. ಶ್ರೀಮತಿ ಹೇಮಾವತಿ ಕೋಂ ಹನುಮಂತಪ್ಪ, 43 ವರ್ಷ, ಮನೆಕೆಲಸ,

8. ಶ್ರೀಯುತ ಸಿ.ಬಿ.ಬೊಮ್ಮೇಗೌಡ ಬಿನ್ ಬಸಪ್ಪ, 72 ವರ್ಷ, ಜಿರಾಯ್ತು,

9. ಶ್ರೀಯುತ ಸಿ.ಬಿ.ಶಿವಕುಮಾರ್ ಬಿನ್ ಬೊಮ್ಮೇಗೌಡ, 30 ವರ್ಷ, ಜಿರಾಯ್ತು,

10. ತೀರ್ಥೇಶ ಬಿನ್ ಲೇಟ್ ಸಿದ್ಧಲಿಂಗಪ್ಪ, 48 ವರ್ಷ, ಜಿರಾಯ್ತು,

ಪ್ರತಿವಾದಿ 5 ರಿಂದ 10 ರವರ ವಾಸಃ ಚಿಕ್ಕಂಗಳ ಗ್ರಾಮ, ಬೀರೂರು ಹೋಬಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

( ಪ್ರತಿವಾದಿಯ 8 ಮತ್ತು 9 ಪರ ಎನ್.ಎಸ್.ಪಿ.,ವಕೀಲರು.
ಪ್ರತಿವಾದಿಯ 1 ರಿಂದ 7 ಎ.ಎಂ.ಆರ್ ವಕೀಲರು ಮತ್ತು ಪ್ರತಿವಾದಿ 10 ರವರು ಏಕಪಕ್ಷೀಯ)

ಃಃ <u>ಮಧ್ಯಂತರ ಅರ್ಜಿ ಸಂಖ್ಯೆ **1** ರ ಪಕ್ಷಗಾರರು</u> ಃಃ

ಅರ್ಜಿದಾರರುಃ ಶ್ರೀಮತಿ ಮರಿಯಮ್ಮ

-ವಿರುದ್ಧ-

ಎದುರುದಾರರುಃ ಶ್ರೀಮತಿ ಆಶಾ ಮತ್ತು ಇತರರು

:: **ಮಧ್ಯಂತರ ಅರ್ಜಿ ಸಂಖ್ಯೆ 1 ರ ಕುರಿತಾದ ಆದೇಶ** ::

ಪ್ರಸ್ತುತ ಈ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ವಾದಿಯು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ39 ನಿಯಮ 1 ಮತ್ತು 2 ಸಹವರ್ತಿ ಕಲಂ 151 ರ ಅಡಿಯಲ್ಲಿ ಸಲ್ಲಿಸಿ, ಈ ದಾವೆಯು ತೀರ್ಮಾನವಾಗುವ ತನಕ ದಾವಾ ಆಸ್ತಿಯು ವಾದಿಯ ಶಾಂತಿಯುತ ಸ್ವಾಧೀನಕ್ಕೆ ಪ್ರತಿವಾದಿಯಾಗಲೀ, ಅಥವಾ ಅವರ ಕಡೆಯ ಬೇರೆ ಯಾರೇ ಆಗಲಿ ಯಾವುದೇ ರೀತಿಯ ಅಡ್ಡಿ ಆತಂಕವನ್ನುಂಟು ಮಾಡದಂತೆ ಹಂಗಾಮಿ ಪ್ರತಿಬಂಧಕಾಜ್ಞೆಯನ್ನು ವಿಧಿಸಲು ಆದೇಶ ಮಾಡಬೇಕಾಗಿ ಪ್ರಾರ್ಥಿಸಿರುತ್ತಾರೆ.

2. ಪ್ರಸ್ತುತ 1 ನೇ ಮಧ್ಯಂತರ ಅರ್ಜಿಗೆ ಪೂರಕವಾಗಿ ವಾದಿಯು ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣಪತ್ರದಲ್ಲಿನ ಅಂಶಗಳು ಈ ಕೆಳಕಂಡಂತೆ ಇವೆಃ-

ವಾದಿಯು ತಮ್ಮ ಮಧ್ಯಂತರ ಅರ್ಜಿಯಲ್ಲಿ ತಾವು ದಾವಾ ಅನುಸೂಚಿ ಸ್ವತ್ತಿನ ನಿರುಪಾದಿಕ ಮಾಲೀಕರಾಗಿದ್ದು ಕಾನೂನು ಬದ್ಧ ಸ್ವಾಧೀನತೆಯನ್ನು ಹೊಂದಿರುತ್ತೇನೆ. ಅದರ ಹಿಂದಿನ ಮಾಲೀಕರಾದ ಶ್ರೀಮತಿ ಯಶೋದ ಮತ್ತು ಅವರ ಮಕ್ಕಳಾದ ಓಂಕಾರೇಶ್ವರ ಮತ್ತು ಕಾರ್ತಿಕ್ ಇವರ ಕಡೆಯಿಂದ ದಿನಾಂಕ 03-06-21014 ರ ನೊಂದಾಣಿ ಕ್ರಯಪತ್ರದ ಮೂಲಕ ಅವರಿಗೆ ಬಂದ ಆಸ್ತಿಯಾಗಿರುತ್ತದೆ. ಸದರಿ ಆಸ್ತಿಯಲ್ಲಿ ಪ್ರತಿವಾದಿಗಳಿಗಾಗಲೀ ಅಥವಾ ಅವರ ಕಡೆಯವರಿಗಾಗಲೀ ಯಾವುದೇ ವಿಧವಾದ ಹಕ್ಕು ಸ್ವಾಧೀನ ಇಲ್ಲ. ದಾವಾ ಆಸ್ತಿಗೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳು ಅವರ ಹೆಸರಿಗೆ ಇರುತ್ತದೆ. ಆದರೂ ಸಹ ಪ್ರತಿವಾದಿಯರು ದಾವಾ ಆಸ್ತಿಯ ಸ್ವಾಧೀನಕ್ಕೆ ಅಡ್ಡಿ ಆತಂಕ ಉಂಟು ಮಾಡಿದ ಕಾರಣ, ಈ ದಾವೆ ಹೂಡಿರುವುದಾಗಿ ತಿಳಿಸಿರುತ್ತಾರೆ.

3. ಮುಂದುವರಿದು ಮೇಲ್ನೋಟಕ್ಕೆ ಸಾಭೀತಾಗುವ ಮೊಕದ್ದಮೆ ವಾದಿಗೆ ಇದ್ದು, ವಾದ ಪತ್ರದ ಅಂಶಗಳನ್ನು ಪ್ರಮಾಣ ಪತ್ರದ ಅಂಶಗಳನ್ನು ಪರಿಶೀಲಿಸುವಂತೆ ವಿನಂತಿಸಿಕೊಂಡಿರುತ್ತಾರೆ. ಮುಂದುವರಿದು ದಾವಾ ಆಸ್ತಿಯು ವಾದಿಯ ಸ್ವಾನಧೀನದಲ್ಲಿದ್ದು ಅವರು ಅದರ ಅಭಿವೃದ್ಧಿ ಮಾಡಿರುವುದಾಗಿ ಮತ್ತು ಪ್ರತಿವಾದಿಯರು ಸ್ಥಳದಲ್ಲಿ ಬಲಿಷ್ಟರಾಗಿದ್ದು, ಯಾವುದೇ ಕ್ಷಣದಲ್ಲಾದರೂ ವಾದಿಯ ಸ್ವಾಧೀನ ತಪ್ಪಿಸುವ ಸಾಧ್ಯತೆ ಇರುತ್ತದೆ. ಈ ದಾವೆ ನಡೆದು ತೀರ್ಮಾನವಾಗುವುದು ಸ್ವಲ್ಪ ಕಾಲಾವಕಾಶ ಹಿಡಿಯಲಿದ್ದು, ಅಲ್ಲಿಯವರೆಗೆ ಪ್ರತಿವಾದಿಯರ ಕಾರ್ಯವನ್ನು ಕಾಯುವುದು ಕಷ್ಟವಾಗಿರುತ್ತದೆ. ಆದ್ದರಿಂದ ಈ ದಾವಾ ತೀರ್ಮಾನವಾಗುವ ತನಕ ಹಂಗಾಮಿ ಪ್ರತಿಬಂಧಕಾಜ್ಞೆ ನೀಡಬೇಕಾಗಿರುವುದು ಅತ್ಯಾವಶ್ಯಕವಾಗಿರುತ್ತದೆ. ಆದುದರಿಂದ ಪರಿಶ್ರಮದ ಒಲವು ವಾದಿಯ ಪರವಾಗಿ ಇರುತ್ತದೆ. ತುಲನಾತ್ಮಕ ನ್ಯಾಯವೂ ಸಹ ಅವರ ಪರವಾಗಿ ಇರುತ್ತದೆ. ಆದ್ದರಿಂದ ಘನ ನ್ಯಾಯಲಯವು ಈ ದಾವೆಯು ತೀರ್ಮಾನವಾಗುವ ತನಕ ದಾವಾ ಆಸ್ತಿಯ ಶಾಂತಿಯುತ ಸ್ವಾಧೀನಕ್ಕೆ ಪ್ರತಿವಾದಿಯವರಾಗಲೀ ಅಥವಾ ಅವರ ಕಡೆಯ ಬೇರೆ ಆಗಲೀ ಯಾವುದೇ ರೀತಿಯ ಅಡ್ಡಿ ಆತಂಕವನ್ನುಂಟು ಮಾಡದಂತೆ ಹಂಗಾಮಿ ಪ್ರತಿಬಂದಕಾಜ್ಞೆಯನ್ನು ವಿಧಿಸಲು ಆದೇಶ ಮಾಡಬೇಕೆಂದು ಪ್ರಾರ್ಥಿಸಿರುತ್ತಾರೆ.

4. ಪ್ರತಿಯಾಗಿ ಪ್ರತಿವಾದಿ 1 ರಿಂದ 7 ರವರು ಪ್ರತ್ಯೇಕ ತಕರಾರನ್ನು ಮತ್ತು ಪ್ರತಿವಾದಿ 8 ಮತ್ತು 9 ರವರು ಪ್ರತ್ಯೇಕ ತಕರಾರನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿ 1 ರಿಂದ 7 ರವರು, ಪ್ರತಿವಾದಿ 7 ರವರು ಸಲ್ಲಿಸಿರುವ ಪ್ರತಿವಾದ ಪತ್ರವನ್ನೆ ಸದರಿ ಮಧ್ಯಂತರ ಅರ್ಜಿಗೆ ತಕರಾರೆಂದು ಪರಿಗಣಿಸಬೇಕೆಂದು ಮೆಮೋವನ್ನು ಹಾಕಿರುತ್ತಾರೆ. ಸದರಿ ತಕರಾರಿನ ಅಂಶಗಳು ಏನೆಂದರೆಃ-

ಪ್ರತಿವಾದಿಯು 1 ರಿಂದ 7 ರವರು, ವಾದಿಯು ತನ್ನ ಪ್ರಮಾಣ ಪತ್ರದಲ್ಲಿ ಹೇಳಿರುವಂಥ ಎಲ್ಲಾ ಸಂಗತಿಗಳನ್ನು ಸಂಪೂರ್ಣ ಸುಳ್ಳು ಎಂದು

ನಿರಾಕರಿಸಿರುತ್ತಾರೆ. ದಾವಾ ಆಸ್ತಿಯು ಮೂಲತಃ ಪ್ರತಿವಾದಿ 1 ರಿಂದ 9 ರವರ ಪಿತ್ರಾರ್ಜಿತ ಆಸ್ತಿಯಾಗಿದ್ದು, ಮೂಲತಃ ಬಸಪ್ಪ ಇವರಿಂದ ಬಸಪ್ಪರವರ ಮಗ ಬೊಮ್ಮೇಗೌಡರವರಿಗೆ ಬಂದಿರುತ್ತದೆ. ದಿ 14-08-2018 ರಂದು ಪ್ರತಿವಾದಿ 8 ಮತ್ತು 9 ರವರು ವಿಭಾಗವನ್ನು ಕೇಳಿದಂತೆ ತಮಗೆ ಇರುವಂಥ ಎಲ್ಲ ಆಸ್ತಿಗಳಲ್ಲಿ ಭಾಗವನ್ನು ನೀಡಿರುತ್ತೇನೆ. ಆದರೆ ಸರ್ವೇ ಸಂಖ್ಯೆ 261/3 ಎ ರಲ್ಲಿ 1 ಎಕರೆ 10 ಗುಂಟೆ ಜಮೀನನ್ನು ವೆಂಕಟರಾಮು ಮತ್ತು ಮರಿಯಮ್ಮ ಎಂಬುವವರು ಅಕ್ರಮವಾಗಿ ಅವರ ಸಹಿ ಇಲ್ಲದೆ ತಾವೇ ಸಹಿ ಮಾಡಿಕೊಂಡು ಖಾತೆ ಮಾಡಿಕೊಂಡಿರುತ್ತಾರೆ. ಆದುದರಿಂದ ಅವರುಗಳ ಅಸಲು ದಾವಾ ನಂ. 477/2018 ನ್ನು ವಿಭಾಗಕ್ಕಾಗಿ ಹೂಡಿರುತ್ತಾರೆ. ವಾದಿಗೆ ಪ್ರತಿವಾದಿ 8 ಮತ್ತು 9 ರವರೇ ಮಾರಾಟ ಮಾಡಿರುತ್ತಾರೆ ಎಂಬುದು ಸುಳ್ಳಿನಿಂದ ಕೂಡಿರುತ್ತದೆ. 1 ಮತ್ತು 7 ನೇ ಪ್ರತಿವಾದಿಗಳು ಸಹ ವಯಸ್ಕರಾಗಿದ್ದು ಅವರ ಸಮ್ಮತಿಯನ್ನು ಏಕೆ ಪಡೆದಿಲ್ಲ ಎನ್ನುವುದನ್ನು ಸಾಬೀತು ಮಾಡಬೇಕಾಗುತ್ತದೆ.

5. ಮುಂದುವರಿದು ವಾದಿಯು ಆರ್ಥಿಕವಾಗಿ ಪ್ರಭಾವಶಾಲಿಯಾಗಿರುವುದರಿಂದ 8 ನೇ ಪ್ರತಿವಾದಿಯವರ ನಕಲಿ ಸಹಿಯನ್ನು ನೋಂದಣಿ ಮಾಡಿಕೊಂಡು ತನ್ನ ಹೆಸರಿಗೆ ಖಾತೆ ಮಾಡಿಕೊಂಡಿರುತ್ತಾರೆ. ಇದು ವಾದಿಯರು ಪ್ರತಿವಾದಿಯರಿಗೆ ಮೋಸ ಮಾಡುವ ಉದ್ದೇಶವಾಗಿರುತ್ತದೆ. ವಾದಿಯು ಪ್ರತಿವಾದಿಯ 1 ಎಕರೆ 10 ಗುಂಟೆ ಆಸ್ತಿಯನ್ನು ಅಕ್ರಮವಾಗಿ ತನ್ನ ಹೆಸರಿಗೆ ಮಾಡಿಕೊಂಡಿದ್ದು ಅಲ್ಲದೇ ಅದರ ಪಕ್ಕದಲ್ಲಿರುವ ಉಳಿದ ಬೊಮ್ಮೇಗೌಡರವರ ಹೆಸರಿನಲ್ಲಿರುವ 1 ಎಕರೆ 8 ಗುಂಟೆ ಜಮೀನನ್ನು ಲಪಟಾಯಿಸವ ಉದ್ದೇಶದಿಂದ ಈ ದಾವೆಯಹುನ್ನು ಸಲ್ಲಿಸಿರುತ್ತಾರೆ.

6. ಮುಂದುವರಿದು ಪ್ರತಿವಾದಿ 8 ಇವರು ತನ್ನ ಹೆಸರಿನಲ್ಲಿರುವ 1 ಎಕರೆ 8 ಗುಂಟೆ ಪ್ರದೇಶವನ್ನು ಆದಿಶಕ್ತಿ ವಿದ್ಯಾಸಂಸ್ಥೆಗೆ ಬಿಟ್ಟುಕೊಟ್ಟಿದ್ದು, ವಿದ್ಯಾಸಂಸ್ಥೆಯವರು ಕೆಲವಷ್ಟು ವರ್ಷ ಶಾಲೆಯನ್ನು ನಡೆಸಿ ನಂತರ ತಮ್ಮಿಂದ ನಡೆಸಲಾಗುವುದಿಲ್ಲ ಎಂದು ಸದರಿ ಶಾಲೆಯನ್ನು ಮುಚ್ಚಿ ಪ್ರತಿವಾದಿ ಹೆಸರಿನಲ್ಲಿರುವ 1 ಎಕರೆ 8

ಗುಂಟೆ ಜಾಗವನ್ನು ಪ್ರತಿವಾದಿ 8 ರವರ ನಕಲಿ ಸಹಿಯನ್ನು ಸೃಷ್ಟಿಸಿ 1 ಎಕರೆ 10 ಗುಂಟೆಯನ್ನು ಅಕ್ರಮವಾಗಿ ಖಾತೆ ಮಾಡಿಕೊಂಡಿರುವುದು ಅಲ್ಲದೆ ಈಗ ಪ್ರತಿವಾದಿ ಹೆಸರಿನಲ್ಲಿರುವ 1 ಎಕರೆ 8 ಗುಂಟೆ ಪ್ರದೇಶವನ್ನು ಸಹ ಲಪಟಾಯಿಸುವ ದೃಷ್ಟಿಯಿಂದ ಪೊಲೀಸ್ ದೌರ್ಜನ್ಯದಿಂದ ಹೆದರಿಸಿ ಇದಕ್ಕೆ ಸಾಧ್ಯಾವಾಗದೇ ಇದ್ದಾಗ ಪ್ರತಿವಾದಿ 8 ರ ವಿರುದ್ಧ ಈ ಸುಳ್ಳು ದಾವೆಯನ್ನು ಹೂಡಿರುತ್ತಾರೆ. ಆದ್ದರಿಂದ ಸದರಿ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ವಜಾ ಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

7. ಪ್ರತಿವಾದಿಯು 8 ಮತ್ತು 9 ರವರು, ತಮ್ಮ ತಕರಾರಿನಲ್ಲಿ ವಾದಿಯು ತನ್ನ ಪ್ರಮಾಣ ಪತ್ರದಲ್ಲಿ ಹೇಳಿರುವಂಥ ಎಲ್ಲಾ ಸಂಗತಿಗಳನ್ನು ಸಂಪೂರ್ಣ ಸುಳ್ಳು ಎಂದು ನಿರಾಕರಿಸಿರುತ್ತಾರೆ. ಪ್ರತಿವಾದಿ 8 ರವರ ವಿರುದ್ಧ ಅವರ ಮಕ್ಕಳಾದ ಆಶಾ ಮತ್ತು ಇತರರು ಅಸಲು ದಾವಾ ನಂ. 477/2018 ನ್ನು ವಿಭಾಗಕ್ಕಾಗಿ ಹೂಡಿರುತ್ತಾರೆ. ಪ್ರತಿವಾದಿ 8 ರವರ ಕುಟುಂದವರು ಇದುವರೆಗೂ ಯಾವುದೇ ರೀತಿಯ ವಿಭಾಗ ಆಗದೆ ಇದ್ದು, ಆದರೆ ವಾದಿಯರು ಪ್ರತಿವಾದಿ 8 ಮತ್ತು 9 ನೇ ಯವರು ಸರ್ವೆ ಸಂಖ್ಯೆ261/3 ಎ ರಲ್ಲಿ 1 ಎಕರೆ 10 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂಬುದು ಸುಳ್ಳಾಗಿರುತ್ತದೆ. ಏಕೆಂದರೆ ಪ್ರತಿವಾದಿ 8 ಮತ್ತು 9 ಸದರಿ ಸ್ವತ್ತನ್ನು ಮಾರಾಟ ಮಾಡಿದ್ದರೆ ಉಳಿದ ತನ್ನ ಎಲ್ಲಾ ಮಕ್ಕಳ ಸಹಿಗಳನ್ನು ಮಾಡಿಸುತ್ತಿದ್ದರು ವಾದಿಯು ಪ್ರತಿವಾದಿಯ ಆಸ್ತಿಯನ್ನು ಲಪಾಟಾಯಿಸುವ ದೃಷ್ಟಿಯಿಂದ ಪ್ರತಿವಾದಿ 8 ರವರ ಸಹಿಯನ್ನು ತಾವೇ ಸೃಷ್ಟಿಸಿಕೊಂಡು ರೆವಿನ್ಯೂ ಅಧಿಕಾರಿಗಳೊಂದಿಗೆ ಅಕ್ರಮ ಖಾತೆ ಮಾಡಿಕೊಂಡಿರುತ್ತಾರೆ . ಆದರೂ ಸಹ ಸದರಿ ಸರ್ವೇ ನಂಬರಿನಲ್ಲಿ 3 ಎಕರೆ 10 ಗುಂಟೆ ಇದ್ದು, ಎಲ್ಲಾ ನನ್ನದೇ ಎಂದು ವಾದಿಗಳು ಪ್ರತಿವಾದಿಗಳ ಮೇಲೆ ದಬ್ಬಾಳಿಕೆ ನಡೆಸಿರುತ್ತಾರೆ. 8 ನೇ ಪ್ರತಿವಾದಿಯು ಸಹಿ ಮಾಡಿ ಕ್ರಯಕ್ಕೆ ನೀಡಿರುತ್ತಾರೆ ಎಂಬುದನ್ನು ವಾದಿಯವರೇ ಸಾಬೀತು ಮಾಡಬೇಕಾಗುತ್ತದೆ.

8. ಮುಂದುವರಿದು ಪ್ರತಿವಾದಿ 8 ಇವರು ತನ್ನ ಹೆಸರಿನಲ್ಲಿರುವ 1 ಎಕರೆ 8 ಗುಂಟೆ ಪ್ರದೇಶವನ್ನು ಆದಿಶಕ್ತಿ ವಿದ್ಯಾಸಂಸ್ಥೆಯವರಿಗೆ ಗ್ರಾಮದ ವಿದ್ಯಾರ್ಥಿಗಳಿಗೆ

ಅನುಕೂಲವಾಗುವ ದೃಷಿಯಿಂದ ಶಾಲೆಯನ್ನು ನಡೆಸಲು ಸ್ವಂತ ಕಟ್ಟಡವನ್ನು ಬಿಟ್ಟುಕೊಟ್ಟಿದ್ದು, ವಿದ್ಯಾಸಂಸ್ಥೆಯವರು ಕೆಲವಷ್ಟು ವರ್ಷ ಶಾಲೆಯನ್ನು ನಡೆಸಿ ನಂತರ ತಮ್ಮಿಂದ ನಡೆಸಲಾಗುವುದಿಲ್ಲ ಎಂದು ಸದರಿ ಶಾಲೆಯನ್ನು ಮುಚ್ಚಿ ಪ್ರತಿವಾದಿ ಹೆಸರಿನಲ್ಲಿರುವ 1 ಎಕರೆ 8 ಗುಂಟೆ ಜಾಗವನ್ನು ಪ್ರತಿವಾದಿ 8 ರವರ ನಕಲಿ ಸಹಿಯನ್ನು ಸೃಷ್ಟಿಸಿ 1 ಎಕರೆ 10 ಗುಂಟೆಯನ್ನು ಅಕ್ರಮವಾಗಿ ಖಾತೆ ಮಾಡಿಕೊಂಡಿರುವುದು ಅಲ್ಲದೆ ಈಗ ಪ್ರತಿವಾದಿ ಹೆಸರಿನಲ್ಲಿರುವ 1 ಎಕರೆ 8 ಗುಂಟೆ ಪ್ರದೇಶವನ್ನು ಸಹ ಲಪಟಾಯಿಸುವ ದೃಷ್ಟಿಯಿಂದ ಪೊಲೀಸ್ ದೌರ್ಜನ್ಯದಿಂದ ಹೆದರಿಸಿ ಇದಕ್ಕೆ ಸಾಧ್ಯಾವಾಗದೇ ಇದ್ದಾಗ ಪ್ರತಿವಾದಿ 8 ರ ವಿರುದ್ಧ ಈ ಸುಳ್ಳು ದಾವೆಯನ್ನು ಹೂಡಿರುತ್ತಾರೆ. ಆದ್ದರಿಂದ ಸದರಿ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ವಜಾ ಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

9. ಉಭಯ ಪಕ್ಷಗಾರರ ವಕೀಲರ ವಾದವನ್ನು ಆಲಿಸಲಾಯಿತು.

10. ಮೇಲ್ಕಾಣಿಸಿದ ಸಂಗತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ನನ್ನ ಪರಿಶೀಲನೆಗೆ ಉದ್ಭವಿಸಿರುತ್ತವೆ:-

ಅಂಶಗಳು

1. ವಾದಿಯರು/ಅರ್ಜಿದಾರರು ಮೇಲ್ನೋಟಕ್ಕೆ ಸಾಬೀತುಪಡಿಸುವ ಪ್ರಕರಣವನ್ನು ಹೊಂದಿರುತ್ತಾರೆ ಎನ್ನುವುದನ್ನು ಸಾಬೀತುಪಡಿಸಿ ದ್ದಾರೆಯೇ?
2. ವಾದಿಯರು/ಅರ್ಜಿದಾರರು ತಮ್ಮ ಪರವಾಗಿ ಅನುಕೂಲತೆಯ ಸಮತೋಲನವನ್ನು ಹೊಂದಿರುತ್ತಾರೆ ಎನ್ನುವುದನ್ನು ಸಾಬೀತುಪಡಿಸಿದ್ದಾರೆಯೇ?
3. ವಾದಿಯರು/ಅರ್ಜಿದಾರರು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡದೇ ಹೋದಲ್ಲಿ ತಮಗೆ ತೊಂದರೆ ಹಾಗೂ ಲುಕ್ಸಾನು ಆಗುತ್ತದೆ ಎನ್ನುವುದನ್ನು ಸಾಬೀತುಪಡಿಸಿದ್ದಾರೆಯೇ?
4. ಹಾಗಾದರೆ ಯಾವ ಆದೇಶ?

11. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತದೆಃ-
ಅಂಶ 1ಃ- ಸಕಾರಾತ್ಮಕವಾಗಿ
ಅಂಶ 2ಃ- ಸಕಾರಾತ್ಮಕವಾಗಿ
ಅಂಶ 3ಃ- ಸಕಾರಾತ್ಮಕವಾಗಿ
ಅಂಶ 4ಃ- ಅಂತಿಮ ಆದೇಶದಂತೆ

<u>ಕಾ ರ ಣ ಗ ಳು</u>

12. <u>**ಅಂಶ 1 ರಿಂದ 3ಃ-**</u> ಈ ಮೂರು ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಇವುಗಳಿಗೆ ನೀಡುವ ಕಾರಣಗಳು ಒಂದೇ ಇರುವುದರಿಂದ ಇವುಗಳನ್ನು ಒಟ್ಟಿಗೆ ಚರ್ಚಿಸಲಾಗಿದೆ.

13. ವಾದಿಯು ತಮ್ಮ ಮಧ್ಯಂತರ ಅರ್ಜಿಯಲ್ಲಿ ತಾವು ದಾವಾ ಅನೂಸೂಚಿ ಸ್ವತ್ತಿನ ನಿರುಪಾದಿಕ ಮಾಲೀಕರಾಗಿದ್ದು ಕಾನೂನು ಬದ್ಧ ಸ್ವಾಧೀನತೆಯನ್ನು ಹೊಂದಿರುತ್ತೇನೆ. ಅದರ ಹಿಂದಿನ ಮಾಲೀಕರಾದ ಶ್ರೀಮತಿ ಯಶೋದ ಮತ್ತು ಅವರ ಮಕ್ಕಳಾದ ಓಂಕಾರೇಶ್ವರ ಮತ್ತು ಕಾರ್ತಿಕ್ ಇವರ ಕಡೆಯಿಂದ ದಿನಾಂಕ 03-06-21014 ರ ನೊಂದಾಣಿ ಕ್ರಯಪತ್ರದ ಮೂಲಕ ಅವರಿಗೆ ಬಂದ ಆಸ್ತಿಯಾಗಿರುತ್ತದೆ. ಸದರಿ ಆಸ್ತಿಯಲ್ಲಿ ಪ್ರತಿವಾದಿಗಳಿಗಾಗಲೀ ಅಥವಾ ಅವರ ಕಡೆಯವರಿಗಾಗಲೀ ಯಾವುದೇ ವಿಧವಾದ ಹಕ್ಕು ಸ್ವಾಧೀನ ಇಲ್ಲ. ದಾವಾ ಆಸ್ತಿಗೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳು ಅವರ ಹೆಸರಿಗೆ ಇರುತ್ತದೆ. ಆದರೂ ಸಹ ಪ್ರತಿವಾದಿಯರು ದಾವಾ ಆಸ್ತಿಯ ಸ್ವಾಧೀನಕ್ಕೆ ಅಡ್ಡಿ ಆತಂಕ ಉಂಟು ಮಾಡಿದ ಕಾರಣ, ಈ ದಾವೆ ಹೂಡಿರುವುದಾಗಿ ತಿಳಿಸಿರುತ್ತಾರೆ.

14. ಮುಂದುವರಿದು ಮೇಲ್ನೋಟಕ್ಕೆ ಸಾಬೀತಾಗುವ ಮೊಕದ್ದಮೆ ವಾದಿಗೆ ಇದ್ದು, ವಾದ ಪತ್ರದ ಅಂಶಗಳನ್ನು ಪ್ರಮಾಣ ಪತ್ರದ ಅಂಶಗಳನ್ನು ಪರಿಶೀಲಿಸುವಂತೆ ವಿನಂತಿಸಿಕೊಂಡಿರುತ್ತಾರೆ. ಮುಂದುವರಿದು ದಾವಾ

ಆಸ್ತಿಯು ವಾದಿಯ ಸ್ವಾನಧೀನದಲ್ಲಿದ್ದು ಅವರು ಅದರ ಅಭಿವೃದ್ಧಿ ಮಾಡಿರುವುದಾಗಿ ಮತ್ತು ಪ್ರತಿವಾದಿಯರು ಸ್ಥಳದಲ್ಲಿ ಬಲಿಷ್ಟರಾಗಿದ್ದು, ಯಾವುದೇ ಕ್ಷಣದಲ್ಲಾದರೂ ವಾದಿಯ ಸ್ವಾಧೀನ ತಪ್ಪಿಸುವ ಸಾಧ್ಯತೆ ಇರುತ್ತದೆ. ಈ ದಾವೆ ನಡೆದು ತೀರ್ಮಾನವಾಗುವುದು ಸ್ವಲ್ಪ ಕಾಲಾವಕಾಶ ಹಿಡಿಯಲಿದ್ದು, ಅಲ್ಲಿಯವರೆಗೆ ಪ್ರತಿವಾದಿಯರ ಕಾರ್ಯವನ್ನು ಕಾಯುವುದು ಕಷ್ಟವಾಗಿರುತ್ತದೆ. ಆದ್ದರಿಂದ ಈ ದಾವಾ ತೀರ್ಮಾನವಾಗುವ ತನಕ ಹಂಗಾಮಿ ಪ್ರತಿಬಂಧಕಾಜ್ಞೆ ನೀಡಬೇಕಾಗಿರುವುದು ಅತ್ಯಾವಶ್ಯಕವಾಗಿರುತ್ತದೆ. ಆದುದರಿಂದ ಪರಿಶ್ರಮದ ಒಲವು ವಾದಿಯ ಪರವಾಗಿ ಇರುತ್ತದೆ. ತುಲನಾತ್ಮಕ ನ್ಯಾಯವೂ ಸಹ ಅವರ ಪರವಾಗಿ ಇರುತ್ತದೆ. ಆದ್ದರಿಂದ ಘನ ನ್ಯಾಯಲಯವು ಈ ದಾವೆಯು ತೀರ್ಮಾನವಾಗುವ ತನಕ ದಾವಾ ಆಸ್ತಿಯ ಶಾಂತಿಯುತ ಸ್ವಾಧೀನಕ್ಕೆ ಪ್ರತಿವಾದಿಯವರಾಗಲೀ ಅಥವಾ ಅವರ ಕಡೆಯ ಬೇರೆ ಆಗಲೀ ಯಾವುದೇ ರೀತಿಯ ಅಡ್ಡಿ ಆತಂಕವನ್ನುಂಟು ಮಾಡದಂತೆ ಹಂಗಾಮಿ ಪ್ರತಿಬಂದಕಾಜ್ಞೆಯನ್ನು ವಿಧಿಸಲು ಆದೇಶ ಮಾಡಬೇಕೆಂದು ಪ್ರಾರ್ಥಿಸಿರುತ್ತಾರೆ.

15. ಪ್ರತಿವಾದಿಯು 1 ರಿಂದ 7 ರವರು ದಾವಾ ಆಸ್ತಿಯು ಮೂಲತಃ ಪ್ರತಿವಾದಿ 1 ರಿಂದ 9 ರವರ ಪಿತ್ರಾರ್ಜಿತ ಆಸ್ತಿಯಾಗಿದ್ದು, ಮೂಲತಃ ಬಸಪ್ಪ ಇವರಿಂದ ಬಸಪ್ಪರವರ ಮಗ ಬೊಮ್ಮೇಗೌಡರವರಿಗೆ ಬಂದಿರುತ್ತದೆ. ದಿ 14-08-2018 ರಂದು ಪ್ರತಿವಾದಿ 8 ಮತ್ತು 9 ರವರು ವಿಭಾಗವನ್ನು ಕೇಳಿದಂತೆ ತಮಗೆ ಇರುವಂಥ ಎಲ್ಲ ಆಸ್ತಿಗಳಲ್ಲಿ ಭಾಗವನ್ನು ನೀಡಿರುತ್ತೇನೆ. ಆದರೆ ಸರ್ವೇ ಸಂಖ್ಯೆ 261/3 ಎ ರಲ್ಲಿ 1 ಎಕರೆ 10 ಗುಂಟೆ ಜಮೀನನ್ನು ವೆಂಕಟರಾಮು ಮತ್ತು ಮರಿಯಮ್ಮ ಎಂಬುವವರು ಅಕ್ರಮವಾಗಿ ಅವರ ಸಹಿ ಇಲ್ಲದೆ ತಾವೇ ಸಹಿ ಮಾಡಿಕೊಂಡು ಖಾತೆ ಮಾಡಿಕೊಂಡಿರುತ್ತಾರೆ. ಆದುದರಿಂದ ಅವರುಗಳ ಅಸಲು ದಾವಾ ನಂ. 477/2018 ನ್ನು ವಿಭಾಗಕ್ಕಾಗಿ ಹೂಡಿರುತ್ತಾರೆ. ವಾದಿಗೆ ಪ್ರತಿವಾದಿ 8 ಮತ್ತು 9 ರವರೇ ಮಾರಾಟ ಮಾಡಿರುತ್ತಾರೆ ಎಂಬುದು ಸುಳ್ಳಿನಿಂದ

ಕೂಡಿರುತ್ತದೆ. 1 ಮತ್ತು 7 ನೇ ಪ್ರತಿವಾದಿಗಳು ಸಹ ವಯಸ್ಕರಾಗಿದ್ದು ಅವರ ಸಮ್ಮತಿಯನ್ನು ಏಕೆ ಪಡೆದಿಲ್ಲ ಎನ್ನುವುದನ್ನು ಸಾಬೀತು ಮಾಡಬೇಕಾಗುತ್ತದೆ.

16. ಮುಂದುವರಿದು ವಾದಿಯು ಆರ್ಥಿಕವಾಗಿ ಪ್ರಭಾವಶಾಲಿಯಾಗಿರುವುದರಿಂದ 8 ನೇ ಪ್ರತಿವಾದಿಯವರ ನಕಲಿ ಸಹಿಯನ್ನು ನೋಂದಣಿ ಮಾಡಿಕೊಂಡು ತನ್ನ ಹೆಸರಿಗೆ ಖಾತೆ ಮಾಡಿಕೊಂಡಿರುತ್ತಾರೆ. ಇದು ವಾದಿಯರು ಪ್ರತಿವಾದಿಯರಿಗೆ ಮೋಸ ಮಾಡುವ ಉದ್ದೇಶವಾಗಿರುತ್ತದೆ. ವಾದಿಯು ಪ್ರತಿವಾದಿಯ 1 ಎಕರೆ 10 ಗುಂಟೆ ಆಸ್ತಿಯನ್ನು ಅಕ್ರಮವಾಗಿ ತನ್ನ ಹೆಸರಿಗೆ ಮಾಡಿಕೊಂಡಿದ್ದು ಅಲ್ಲದೇ ಅದರ ಪಕ್ಕದಲ್ಲಿರುವ ಉಳಿದ ಬೊಮ್ಮೇಗೌಡರವರ ಹೆಸರಿನಲ್ಲಿರುವ 1 ಎಕರೆ 8 ಗುಂಟೆ ಜಮೀನನ್ನು ಲಪಟಾಯಿಸವ ಉದ್ದೇಶದಿಂದ ಈ ದಾವೆಯಹುನ್ನು ಸಲ್ಲಿಸಿರುತ್ತಾರೆ.

17. ಮುಂದುವರಿದು ಪ್ರತಿವಾದಿ 8 ಇವರು ತನ್ನ ಹೆಸರಿನಲ್ಲಿರುವ 1 ಎಕರೆ 8 ಗುಂಟೆ ಪ್ರದೇಶವನ್ನು ಆದಿಶಕ್ತಿ ವಿದ್ಯಾಸಂಸ್ಥೆಗೆ ಬಿಟ್ಟುಕೊಟ್ಟಿದ್ದು, ವಿದ್ಯಾಸಂಸ್ಥೆಯವರು ಕೆಲವಷ್ಟು ವರ್ಷ ಶಾಲೆಯನ್ನು ನಡೆಸಿ ನಂತರ ತಮ್ಮಿಂದ ನಡೆಸಲಾಗುವುದಿಲ್ಲ ಎಂದು ಸದರಿ ಶಾಲೆಯನ್ನು ಮುಚ್ಚಿ ಪ್ರತಿವಾದಿ ಹೆಸರಿನಲ್ಲಿರುವ 1 ಎಕರೆ 8 ಗುಂಟೆ ಜಾಗವನ್ನು ಪ್ರತಿವಾದಿ 8 ರವರ ನಕಲಿ ಸಹಿಯನ್ನು ಸೃಷ್ಟಿಸಿ 1 ಎಕರೆ 10 ಗುಂಟೆಯನ್ನು ಅಕ್ರಮವಾಗಿ ಖಾತೆ ಮಾಡಿಕೊಂಡಿರುವುದು ಅಲ್ಲದೆ ಈಗ ಪ್ರತಿವಾದಿ ಹೆಸರಿನಲ್ಲಿರುವ 1 ಎಕರೆ 8 ಗುಂಟೆ ಪ್ರದೇಶವನ್ನು ಸಹ ಲಪಟಾಯಿಸುವ ದೃಷ್ಟಿಯಿಂದ ಪೊಲೀಸ್ ದೌರ್ಜನ್ಯದಿಂದ ಹೆದರಿಸಿ ಇದಕ್ಕೆ ಸಾಧ್ಯಾವಾಗದೇ ಇದ್ದಾಗ ಪ್ರತಿವಾದಿ 8 ರ ವಿರುದ್ಧ ಈ ಸುಳ್ಳು ದಾವೆಯನ್ನು ಹೂಡಿರುತ್ತಾರೆ. ಆದ್ದರಿಂದ ಸದರಿ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ವಜಾ ಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

18. ಪ್ರತಿವಾದಿಯು 8 ಮತ್ತು 9 ರವರು, ಪ್ರತಿವಾದಿ 8 ರವರ ವಿರುದ್ಧ ಅವರ ಮಕ್ಕಳಾದ ಆಶಾ ಮತ್ತು ಇತರರು ಅಸಲು ದಾವಾ ನಂ. 477/2018 ನ್ನು ವಿಭಾಗಕ್ಕಾಗಿ ಹೂಡಿರುತ್ತಾರೆ. ಪ್ರತಿವಾದಿ 8 ರವರ ಕುಟುಂದವರು ಇದುವರೆಗೂ

ಯಾವುದೇ ರೀತಿಯ ವಿಭಾಗ ಆಗದೆ ಇದ್ದು, ಆದರೆ ವಾದಿಯರು ಪ್ರತಿವಾದಿ 8 ಮತ್ತು 9 ನೇ ಯವರು ಸರ್ವೆ ಸಂಖ್ಯೆ 261/3 ಎ ರಲ್ಲಿ 1 ಎಕರೆ 10 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂಬುದು ಸುಳ್ಳಾಗಿರುತ್ತದೆ. ಏಕೆಂದರೆ ಪ್ರತಿವಾದಿ 8 ಮತ್ತು 9 ಸದರಿ ಸ್ವತ್ತನ್ನು ಮಾರಾಟ ಮಾಡಿದ್ದರೆ ಉಳಿದ ತನ್ನ ಎಲ್ಲಾ ಮಕ್ಕಳ ಸಹಿಗಳನ್ನು ಮಾಡಿಸುತ್ತಿದ್ದರು ವಾದಿಯು ಪ್ರತಿವಾದಿಯ ಆಸ್ತಿಯನ್ನು ಲಪಾಟಾಯಿಸುವ ದೃಷ್ಟಿಯಿಂದ ಪ್ರತಿವಾದಿ 8 ರವರ ಸಹಿಯನ್ನು ತಾವೇ ಸೃಷ್ಟಿಸಿಕೊಂಡು ರೆವಿನ್ಯೂ ಅಧಿಕಾರಿಗಳೊಂದಿಗೆ ಅಕ್ರಮ ಖಾತೆ ಮಾಡಿಕೊಂಡಿರುತ್ತಾರೆ . ಆದರೂ ಸಹ ಸದರಿ ಸರ್ವೇ ನಂಬರಿನಲ್ಲಿ 3 ಎಕರೆ 10 ಗುಂಟೆ ಇದ್ದು, ಎಲ್ಲಾ ನನ್ನದೇ ಎಂದು ವಾದಿಗಳು ಪ್ರತಿವಾದಿಗಳ ಮೇಲೆ ದಬ್ಬಾಳಿಕೆ ನಡೆಸಿರುತ್ತಾರೆ. 8 ನೇ ಪ್ರತಿವಾದಿಯು ಸಹಿ ಮಾಡಿ ಕ್ರಯಕ್ಕೆ ನೀಡಿರುತ್ತಾರೆ ಎಂಬುದನ್ನು ವಾದಿಯವರೇ ಸಾಬೀತು ಮಾಡಬೇಕಾಗುತ್ತದೆ.

19. ಮುಂದುವರಿದು ಪ್ರತಿವಾದಿ 8 ಇವರು ತನ್ನ ಹೆಸರಿನಲ್ಲಿರುವ 1 ಎಕರೆ 8 ಗುಂಟೆ ಪ್ರದೇಶವನ್ನು ಆದಿಶಕ್ತಿ ವಿದ್ಯಾಸಂಸ್ಥೆಯವರಿಗೆ ಗ್ರಾಮದ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ದೃಷಿಯಿಂದ ಶಾಲೆಯನ್ನು ನಡೆಸಲು ಸ್ವಂತ ಕಟ್ಟಡವನ್ನು ಬಿಟ್ಟುಕೊಟ್ಟಿದ್ದು, ವಿದ್ಯಾಸಂಸ್ಥೆಯವರು ಕೆಲವಷ್ಟು ವರ್ಷ ಶಾಲೆಯನ್ನು ನಡೆಸಿ ನಂತರ ತಮ್ಮಿಂದ ನಡೆಸಲಾಗುವುದಿಲ್ಲ ಎಂದು ಸದರಿ ಶಾಲೆಯನ್ನು ಮುಚ್ಚಿ ಪ್ರತಿವಾದಿ ಹೆಸರಿನಲ್ಲಿರುವ 1 ಎಕರೆ 8 ಗುಂಟೆ ಜಾಗವನ್ನು ಪ್ರತಿವಾದಿ 8 ರವರ ನಕಲಿ ಸಹಿಯನ್ನು ಸೃಷ್ಟಿಸಿ 1 ಎಕರೆ 10 ಗುಂಟೆಯನ್ನು ಅಕ್ರಮವಾಗಿ ಖಾತೆ ಮಾಡಿಕೊಂಡಿರುವುದು ಅಲ್ಲದೆ ಈಗ ಪ್ರತಿವಾದಿ ಹೆಸರಿನಲ್ಲಿರುವ 1 ಎಕರೆ 8 ಗುಂಟೆ ಪ್ರದೇಶವನ್ನು ಸಹ ಲಪಟಾಯಿಸುವ ದೃಷ್ಟಿಯಿಂದ ಪೊಲೀಸ್ ದೌರ್ಜನ್ಯದಿಂದ ಹೆದರಿಸಿ ಇದಕ್ಕೆ ಸಾಧ್ಯಾವಾಗದೇ ಇದ್ದಾಗ ಪ್ರತಿವಾದಿ 8 ರ ವಿರುದ್ಧ ಈ ಸುಳ್ಳು ದಾವೆಯನ್ನು ಹೂಡಿರುತ್ತಾರೆ. ಆದ್ದರಿಂದ ಸದರಿ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ವಜಾ ಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

**20**. ವಾದಿಯು ಸದರಿ ಮಧ್ಯಂತರ ಅರ್ಜಿಗೆ ಪೂರಕವಾಗಿ ಕೆಲವೊಂದು ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ. ದಾವಾ ಆಸ್ತಿಗೆ ಸಂಬಂದಿಸಿದ ದಿನಾಂಕಃ 1-5-2019 ರ ಆರ್.ಟಿ.ಸಿ. ದಾವಾ ಆಸ್ತಿಯು ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಆದ ಬಗ್ಗೆ ದಿನಾಂಕಃ 5-1-2019 ರ ಎಂ.ಆರ್ ನ ಪ್ರತಿ. ದಾವಾ ಆಸ್ತಿಗೆ ಸಂಬಂಧಿಸಿದ ದಿನಾಂಕ 2-1-2002 ಮತ್ತು ದಿನಾಂಕ 3-6-2014 ರ 2 ದೃಢೀಕೃತ ಕ್ರಯ ಪತ್ರಗಳು, ಸಾರ್ವಜನಿಕ ಶಿಕ್ಷಣ ಇಲಾಖೆಯವರು ನೀಡಿರುವ ಮೂರು ಜ್ಞಾಪನ ಪತ್ರಗಳು , ದಾವಾ ಸ್ವತ್ತಿಗೆ ಸಂಬಂಧಿಸಿದ 17 ಫೋಟೋಗಳನ್ನು ಹಾಜರುಪಡಿಸಿರುತ್ತಾರೆ. ಪ್ರತಿವಾದಿ 8 ಮತ್ತು 9 ರಅವರು ಒಮದು ಸ್ಕೆಚ್ ,ಆರ್,ಟಿ,ಸಿ. ಮತ್ತುತಹಶಿಲ್ದಾರ್ ರವರಿಗೆ ನೀಡಿದ ದೂರಿನ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.ಸದರಿ ದಾಖಲಾತಿಗಳನ್ನು ಪರಿಶೀಲಿಸಲಾಯಿತು.

21. ದಿನಾಂಕ 2-1-2012 ರಂದು ಕ್ರಯ ಪತ್ರದ ಮುಖಾಂತರ ದಾವಾ ಆಸ್ತಿಯನ್ನು 8 ನೇ ಪ್ರತಿವಾದಿಯು ವೆಂಕಟರಾಮುರವರಿಗೆ ಮಾರಾಟ ಮಾಡಿರುವುದು ಕಂಡುಬರುತ್ತದೆ. ನಂತರ ದಿನಾಂಕ 3-6-2014 ರ ನೋಂದಣಿ ಕ್ರಯಪತ್ರದಂತೆ ಸದರಿ ವೆಂಕಟರಾಮುರವರ ಹೆಂಡತಿ ಮತ್ತು ಮಕ್ಕಳು ದಾವಾ ಆಸ್ತಿಯನ್ನು ವಾದಿಗೆ ಮಾರಾಟ ಮಾಡಿರುವುದು ಕಂಡುಬರುತ್ತದೆ. ಅದರಂತೆ ದಾವಾ ಆಸ್ತಿಯ ಖಾತೆ ಎಂ. ಆರ್. 26/13-14 ರಂತೆ ವಾದಿಯ ಹೆಸರಿಗೆ ವರ್ಗಾವಣೆ ಆಗಿರುವುದು ಕಂಡುಬರುತ್ತದೆ. ಆದುದರಿಂದ ದಾವಾ ಆಸ್ತಿಯ ಖಾತೆ ವಾದಿಯ ಹೆಸರಿನಲ್ಲಿರುವುದು ಕಂಡುಬರುತ್ತದೆ.

**22**. ಉಭಯ ಪಕ್ಷಕಾರರ ಹೇಳಿಕೆಗಳನ್ನು ಮತ್ತು ದಾಖಲಾತಿಗಳನ್ನು ಪರಿಶೀಲಿಸಲಾಗಿ, ವಾದಿ ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ಹಂಗಾಮಿ ಪ್ರತಿಬಂದಕಾಜ್ಞೆಯನ್ನು ಕೋರಿ ಸಲ್ಲಿಸಿರುವುದು ಕಂಡುಬರುತ್ತದೆ. ದಾವಾ ಅನುಸೂಚಿ ಸ್ವತ್ತು ಮೂಲತಃ 8 ನೇ ಪ್ರತಿವಾದಿಗೆ ಸೇರಿದ್ದು, 8 ನೇ ಪ್ರತಿವಾದಿ ವೆಂಕಟರಾಮು ಎಂಬುವವರಿಗೆ ನೊಂದಣಿ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದು, ನಂತರ ಸದರಿ ವೆಂಕಟರಾಮುರವರು ಮೃತ ಹೊಂದಿದ್ದು

ವೆಂಕಟರಾಮು ಅವರ ಹೆಂಡತಿ ಮತ್ತು ಮಕ್ಕಳು ವಾದಿಗೆ ದಾವಾ ಆಸ್ತಿಯನ್ನು ದಿನಾಂಕ 3-6-2014 ರಲ್ಲಿ ನೊಂದಣಿ ಕ್ರಯ ಪತ್ರದ ಮೂಲಕ ವಾದಿಗೆ ಮಾರಾಟ ಮಾಡಿದ್ದು ವಾದಿ ಖರೀದಿ ಮಾಡಿದ್ದು, ಸದರಿ ಆಸ್ತಿಯ ಖಾತೆ ವಾದಿಯ ಹೆಸರಿಗೆ ವರ್ಗಾವಣೆಯಾಗಿ ವಾದಿಯು ಸ್ವಾಧೀನವನ್ನು ಹೊಂದಿರುವುದಾಗಿ ವಾದಿಯ ಪರ ವಕೀಲರು ವಾದ ಮಂಡಿಸಿರುತ್ತಾರೆ.

23. ವಾದಿ ಪರ ಹಾಜರು ಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ ದಾವಾ ಆಸ್ತಿಯನ್ನು ದಿನಾಂಕ 2-1-2002 ರಲ್ಲಿ ನೊಂದಣಿ ಕ್ರಯ ಪತ್ರದ ಮೂಲಕ 8 ನೇ ಪ್ರತಿವಾದಿಯು ವೆಂಕಟರಾಮು ಎಂಬುವವರಿಗೆ ಮಾರಾಟ ಮಾಡಿರುವುದು ಕಂಡುಬರುತ್ತದೆ. ತದನಂತರ ದಿನಾಂಕ 3-6-2014 ರಂದು ಸದರಿ ವೆಂಕಟರಾಮುರವರ ಹೆಂಡತಿ ಮಕ್ಕಳಿಂದ ದಾವಾ ಆಸ್ತಿಯನ್ನು ವಾದಿ ನೊಂದಣಿ ಕ್ರಯದ ಮೂಲಕ ಖರೀದಿಸಿರುವುದು ಕಂಡುಬರುತ್ತದೆ ಸದರಿ ಕ್ರಯ ಪತ್ರದಂತೆ ದಾವಾ ಆಸ್ತಿಯ ಖಾತೆ ವಾದಿ ಹೆಸರಿಗೆ ವರ್ಗಾವಣೆ ಆಗಿರುವುದು ಕಂಡುಬರುತ್ತದೆ. ವಾದಿಯು ಹಾಜರುಪಡಿಸಿರುವ ಪಹಣಿ ಪತ್ರಿಕೆಗಳನ್ನು ಪರಿಶೀಲಿಸಿದಾಗ ಸರ್ವೆ ಸಂಖ್ಯೆ 261/4 ರಲ್ಲಿ 1 ಎಕರೆ 10 ಗುಂಟೆ ಜಮೀನು ವಾದಿಯ ಹೆಸರಿನಲ್ಲಿ ಇರುವುದು ಕಂಡುಬರುತ್ತದೆ. ವಾದಿಯು ಹಾಜರುಪಡಿಸಿರುವ 2 ಕ್ರಯ ಪತ್ರಗಳನ್ನು ಪರಿಶೀಲಿಸಿದಾಗ ಸದರಿ ದಾಖಲಾತಿಗಳಲ್ಲಿ ನಮೂದಿಸಿರುವ ಸ್ವತ್ತುಗಳು ಮತ್ತು ದಾವಾ ಆಸ್ತಿಯು ಅನುಸೂಚಿಯಲ್ಲಿ ನಮೂದಿಸಿರುವ ಸ್ವತ್ತುಗಳು ಒಂದೇ ಆಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

24. 1 ರಿಂದ 7 ನೇ ಪ್ರತಿವಾದಿಯರು ಹೇಳುವಂತೆ ದಾವಾ ಆಸ್ತಿಯಲ್ಲಿ 1 ರಿಂದ 7 ಪ್ರತಿವಾದಿಗಳಿಗೆ ಹಕ್ಕು ಇದೆ ಎಂದು ದಾವಾ ಸಂಖ್ಯೆ 277/18 ರಲ್ಲಿ ನಿರ್ಧಿರಿತವಾದರೆ ಅಷ್ಟೇ 1 ರಿಂದ 7 ನೇ ಪ್ರತಿವಾದಿಗಳಿಗೆ ದಾವಾ ಆಸ್ತಿಯಲ್ಲಿ ಹಕ್ಕು ಬರುತ್ತದೆ. ಪ್ರತಿವಾದಿಗಳು ತಾವು ಸಲ್ಲಿಸಿರುವ ತಕರಾರಿನಲ್ಲಿ ಪೂರಕವಾದಂಥ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಹಾಗೂ 8 ನೇ ಪ್ರತಿವಾದಿ ದಾವಾ ಆಸ್ತಿಯನ್ನು ವೆಂಕಟರಾಮು ಎಂಬುವವರಿಗೆ ಕ್ರಯ ಪತ್ರ ಮಾಡಿಕೊಟ್ಟಿರುವುದನ್ನು

ಅಲ್ಲಗಳೆದಿರುತ್ತಾರೆ ಆದರೆ ಸದರಿ ಕ್ರಯಪತ್ರವು ನೋಂದಾಯಿತ ಕ್ರಯಪತ್ರವಾಗಿರುತ್ತದೆ. ಸದರಿ ವಿಚಾರವನ್ನು ಈ ಹಂತದಲ್ಲಿ ನಿರ್ಣಯಿಸಲು ಬರುವುದಿಲ್ಲ. ಮೇಲಾಗಿ 8 ನೇ ಪ್ರತಿವಾದಿ ಕ್ರಯ ಪತ್ರವನ್ನು ದಿನಾಂಕ 2-1-2002 ರಲ್ಲಿ ಮಾಡಿಕೊಟ್ಟಿದ್ದು 2018 ರ ವರೆಗೆ ಅದರ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದಿರುವುದು ಕಂಡುಬರುತ್ತದೆ. ಹಾಗೂ ವಾದಿಯು ದಾವಾ ಆಸ್ತಿಯನ್ನು ದಿನಾಂಕ 3-6-2014 ರಲ್ಲಿ ನೊಂದಣಿ ಕ್ರಯ ಪತ್ರದ ಮೂಲಕ ಖರೀದಿ ಮಾಡಿ ಸ್ವಾಧೀನ ಇರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಹಾಗಾಗಿ ದಿನಾಂಕ 3-6-2014 ನೊಂದಾಣಿತ ಕ್ರಯ ಪತ್ರ, ಪಹಣಿ, ಮ್ಯೂಟೇಶನ್ ರಿಜಿಸ್ಟರ್ ದಾಖಲಾತಿಗಳನ್ನು ಪರಿಗಣಿಸಬೇಕಾಗುತ್ತದೆ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ. ಈ ಕುರಿತು ಪರಿಶೀಲಿಸಲಾಗಿ ಕಲಂ 133 ರಂತೆ ಯಾವುದೇ ಎಂದು ಪಹಣಿ ಅಥವಾ ಮ್ಯೂಟೇಶನ್ ದಾಖಲೆಗಳಲ್ಲಿ ನಮೂದುಗಳು ಎದುರು ಪಕ್ಷಕಾರರು ಖಂಡಿಸಬಹುದಾದ ಅಂಶಗಳನ್ನು ಸಾಭೀತುಪಡಿಸದ ಹೊರತು ಸದರಿ ಪಹಣಿಯಲ್ಲಿರುವ ಮತ್ತು ಮ್ಯೂಟೇಶನ್‌ಲ್ಲಿರುವ ಅಂಶಗಳನ್ನು ಸದರಿ ಅಂಶಗಳ ಮೇಲೆ ಸ್ವತ್ತಿನಲ್ಲಿರುವಂತೆ ಪೂರ್ವ ಭಾವನೆಯನ್ನು ಮಾಡಲಾಗುವುದು ಎಂದು ವಿವರಿಸಲಾಗಿರುತ್ತದೆ. ಈ ಕುರಿತು ಪರಿಶೀಲಿಸಲಾಗಿ ಪ್ರತಿವಾದಿ ಈ ಪ್ರಕರಣದಲ್ಲಿ ವಾದಿಯ ದಾವಾ ಸ್ವತ್ತಿನ ಸ್ವಾಧೀನತೆ ಕುರಿತಾಗಿ ಯಾವುದೇ ವ್ಯತಿರಿಕ್ತ ಅಂಶಗಳನ್ನು ರುಜುವಾತು ಪಡಿಸಿರುವುದಿಲ್ಲ. ಸದರಿ ಪಹಣಿಯಲ್ಲಿನ ಮತ್ತು ಮ್ಯೂಟೇಶನ್‌ನಲ್ಲಿನ ನಮೂದು ಕುರಿತು ಸ್ಪಷ್ಟವಾಗಿ ವಾದಿಯ ಪರ ಪೂರ್ವ ಭಾವನೆಯನ್ನು ಉಂಟು ಮಾಡುತ್ತವೆ ಎಂದು ಈ ನ್ಯಾಯಾಲಯವು ಅಭಿಪ್ರಾಯಕ್ಕೆ ಬರುತ್ತದೆ. ವಾದಿಯು ದಾವಾ ಸ್ವತ್ತಿನಲ್ಲಿ ಸ್ವಾದೀನಾನುಭವ ಹೊಂದಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತಿದೆ.

25. ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ವಾದಿಯು ದಾವಾ ಅನುಸೂಚಿತ ಸ್ವತ್ತಿನ ಸ್ವಾಧೀನತೆಯನ್ನು ಹೊಂದಿದ್ದು, ಸದರಿ ವಾದಿಯ ಶಾಂತಿಯುತ ಸ್ವಾಧೀನತೆಗೆ ಮತ್ತು ಅನುಭೋಗಕ್ಕೆ ಪ್ರತಿವಾದಿಯರು ತಕರಾರು

ಮಾಡಿರುವುದು ಸ್ಪಷ್ಟವಾಗಿ ಮೇಲ್ನೋಟಕ್ಕೆ ಕಂಡುಬರುತ್ತದೆ. ಹಾಗಾಗಿ ವಾದಿಯು ಈ ಪ್ರಕರಣದಲ್ಲಿ ಮೇಲ್ನೋಟಕ್ಕೆ ಸಾಬೀತುಪಡಿಸಬಹುದಾದ ಪ್ರಕರಣವನ್ನು ಹೊಂದಿರುತ್ತಾರೆಂದು ಹಾಗೂ ತಮ್ಮ ಪರವಾಗಿ ಅನುಕೂಲತೆಯ ಒಲವನ್ನು ಹೊಂದಿರುತ್ತಾರೆಂದು, ಒಂದೊಮ್ಮೆ ವಾದಿಯ ಪರವಾಗಿ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡದಿದ್ದ ಪಕ್ಷದಲ್ಲಿ ವಾದಿಗೆ ತುಂಬಲಾರದ ನಷ್ಟವುಂಟಾಗುತ್ತದೆ ಎಂದು ಮಾನ್ಯ ನ್ಯಾಯಾಲಯವು ನಿರ್ಣಯಕ್ಕೆ ಬರುತ್ತದೆ. ಆದ್ದರಿಂದ ಈ ಮೇಲ್ಕಂಡ ಅಂಶ 1 ರಿಂದ 3 ನ್ನು ಸಕಾರಾತ್ಮಕ ಎಂದು ನಿರ್ಣಯಿಸಲಾಗಿದೆ.

26. <u>ಅಂಶ 4:-</u> ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ನಿರ್ಣಯಿಸಲಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

## <u>ಆದೇಶ</u>

ವಾದಿಯರು/ಅರ್ಜಿದಾರರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವರ್ತಿ ಕಲಂ 151 ರ ಅಡಿಯಲ್ಲಿ ಸಲ್ಲಿಸಿದಂತಹ ಮಧ್ಯಂತರ ಅರ್ಜಿ ಸಂಖ್ಯೆ:1 ನ್ನು ಪುರಸ್ಕರಿಸಲಾಗಿದೆ.

ಪ್ರತಿವಾದಿಯರಾಗಲಿ, ಅವರ ಕುಟುಂಬದ ಸದಸ್ಯರಾಗಲಿ ಅಥವಾ ಅವರಿಂದ ನೇಮಕಗೊಂಡ ಯಾವುದೇ ಕೆಲಸಗಾರರಾಗಲೀ, ಪ್ರತಿವಾದಿಯ ಬೆಂಬಲಿಗರಾಗಲೀ ಅಥವಾ ಯಾವುದೇ ವ್ಯಕ್ತಿಗಳಾಗಲೀ ದಾವಾ ಅನುಸೂಚಿತ ಸ್ವತ್ತಿಗೆ ಅತಿಕ್ರಮಣ ಪ್ರವೇಶ ಮಾಡದಂತೆ ಹಾಗೂ ಹಾನಿ ಉಂಟು ಮಾಡದಂತೆ ಮತ್ತು ವಾದಿಯ ಶಾಂತಿಯುತ ಅನುಭೋಗಕ್ಕೆ ತೊಂದರೆ ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶವನ್ನು ಮಂಜೂರು ಮಾಡಲಾಗಿರುತ್ತದೆ.

ಖರ್ಚಿನ ಬಗ್ಗೆ ಯಾವುದೇ ಆದೇಶವಿರುವುದಿಲ್ಲ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಕಂಪ್ಯೂಟರ್ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ, ಓದಿ ತಿದ್ದಿ ಪ್ರತಿ ತೆಗೆದು ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ: 17 ನೇ ಮಾರ್ಚ್ 2020 ರಂದು ನಾನು ಉದ್ಘೋಷಿಸಿದ್ದೇನೆ.)

(ದೀಪು ಎಂ.ಟಿ.)
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ., ಕಡೂರು.